ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜ ನಿ : ಸುಮಪ : 2020–21 ದಿನಾಂಕ : 20–08–2020

## ಪತ್ರಿಕಾ ಆಮಂತ್ರಣ

**1. ಅಗ್ರಿ ಸ್ಟಾರ್ಟಪ್ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮದ ಚಿತ್ರೀಕರಣ:**

**ಉದ್ಘಾಟನೆ :**

**ಬಿ.ಸಿ. ಪಾಟೀಲ್, ಕೃಷಿ ಸಚಿವರು**

**ದಿನಾಂಕ : 21–08–2020, ಶುಕ್ರವಾರ, ಸಮಯ: ಬೆಳಿಗ್ಗೆ 10–30 ಗಂಟೆಗೆ**

**ಸ್ಥಳ : ಕೊಠಡಿ ಸಂಖ್ಯೆ 419, 4 ನೇ ಮಹಡಿ, ವಿಕಾಸ ಸೌಧ, ಬೆಂಗಳೂರು**

## ಪತ್ರಿಕಾ ಪ್ರಕಟಣೆ

## ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ– 2021

**ಬೆಂಗಳೂರು, ಆಗಸ್ಟ್ 20 (ಕರ್ನಾಟಕ ವಾರ್ತೆ)**

ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಯನ್ನು ನಡೆಸಲು, ದೋಷಮುಕ್ತ ಮತ್ತು ಸ್ವಚ್ಛ ಮತದಾರರ ಪಟ್ಟಿ ಅತ್ಯಾವಶ್ಯಕ. ಭಾರತ ಚುನಾವಣಾ ಆಯೋಗವು, ಎಲ್ಲರನ್ನೊಳಗೊಂಡ ಮತ್ತು ದೋಷಮುಕ್ತ ಮತದಾರರ ಪಟ್ಟಿಯನ್ನು ಸಿದ್ದ ಪಡಿಸುವಿಕೆಗೆ ಹೆಚ್ಚು ಮಹತ್ವವನ್ನು ನೀಡಿದೆ.

**ಉದ್ದೇಶಗಳು:**

1. ಪ್ರತಿಯೊಬ್ಬ ಅರ್ಹ ವ್ಯಕ್ತಿಯ ಹೆಸರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಂಡಿರಬೇಕು.

2. ಮೃತರಾಗಿರುವ, ಸ್ಥಳ ಬದಲಾಯಿಸಿರುವ ಅಥವಾ ಹೆಸರು ಪುನಾವರ್ತನೆಗೊಂಡಿರುವ ಅನರ್ಹ ವ್ಯಕ್ತಿಗಳ ಹೆಸರನ್ನು ನಿಯಮಾನುಸಾರ ಮತದಾರರ ಪಟ್ಟಿಯಿಂದ ತೆಗೆದುಹಾಕುವುದು.
3. ಮತದಾರರ ಹೆಸರು, ಜನ್ಮ ದಿನಾಂಕ/ವಯಸ್ಸು, ಭಾವಚಿತ್ರ, ವಿಳಾಸ ಇತ್ಯಾದಿ ಎಲ್ಲಾವಿವರಗಳು ನಿಖರವಾಗಿಪೂರ್ಣವಾಗಿರುವುದು.

**ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ 2021:-**

ಭಾರತ ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ 2021 ರ ವೇಳಾ ಪಟ್ಟಿಯನ್ನು ಘೋಷಿಸಿದ್ದು, ಅದು ಈ ಕೆಳಗಿನಂತಿರುತ್ತದೆ.

| | | |
|---|---|---|
| 1 | (1)ಮತಗಟ್ಟೆಗಳ ಪುನರ್ ವಿಂಗಡಣೆ ಹಾಗೂ ಕ್ರಮಬದ್ಧಪಡಿಸುವಿಕೆ.<br>(2)ಮತಪಟ್ಟಿಯಲ್ಲಿನ ಭಾಗಗಳಲ್ಲಿರುವ DSEs & EPICs ದೋಷಗಳ ಸರಿಪಡಿಸುವಿಕೆ (ದಿನಾಂಕ:31.08.2020 ರೊಳಗೆ)<br>(3) ಮತಪಟ್ಟಿಯಲ್ಲಿನ ಭಾಗ / ಸೆಕ್ಷನ್‌ಗಳ ಕ್ರಮಬದ್ಧಪಡಿಸುವಿಕೆ ಹಾಗೂ ಮತಗಟ್ಟೆಗಳ ಪ್ರದೇಶದ ವ್ಯಾಪ್ತಿಯ ಪುನರ್ ವಿಂಗಡಣೆ ಮತ್ತು ಮತಗಟ್ಟೆ ಪಟ್ಟಿಗೆಅನುಮೋದನೆ ಪಡೆಯುವಿಕೆ. | 10–08–2020 (ಸೋಮವಾರ) ರಿಂದ 31–10–2020 (ಶನಿವಾರ) |
| 2 | ನಮೂನೆ 1 ರಿಂದ 8 ನ್ನು ಸಿದ್ದಪಡಿಸುವುದು<br>ಹಾಗೂ ಪೂರಕ ಮತ್ತು ಸಮಗ್ರಕರಡು ಮತದಾರರ ಪಟ್ಟಿ ಸಿದ್ದಪಡಿಸುವುದು | 01–11–2020 (ಭಾನುವಾರ) ರಿಂದ 15–11–2020 (ಭಾನುವಾರ) |
| 3 | ಒಟ್ಟುಗೂಡಿಸಿದ ಕರಡು ಮತದಾರರ ಪಟ್ಟಿ ಪ್ರಕಟಣೆ | 16–11–2020 (ಸೋಮವಾರ) |
| 4 | ಕ್ಲೇಮ್ ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವಅವಧಿ. | 16–11–2020 (ಸೋಮವಾರ) ರಿಂದ 15–12–2020(ಮಂಗಳವಾರ) |
| 5 | ವಿಶೇಷ ಪ್ರಚಾರದ ದಿನಗಳು. | ಮುಖ್ಯಚುನಾವಣಾಧಿಕಾರಿಯವರು ಸೂಚಿಸುವಂತೆ ಆಕ್ಷೇಪಣೆಗಳು ಹಾಗೂ ಹಕ್ಕುಗಳ ಅವಧಿಯಲ್ಲಿಎರಡು ಶನಿವಾರಗಳು ಮತ್ತು ಭಾನುವಾರ |

| | | |
|---|---|---|
| 6 | ಕ್ಲೇಮ್ ಮತ್ತುಆಕ್ಷೇಪಣೆ ಅರ್ಜಿಗಳನ್ನು ವಿಲೇವಾರಿ ಮಾಡುವುದು. | 05–01–2021(ಮಂಗಳವಾರ)ದೊಳಗೆ |
| 7 | ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲುಆಯೋಗದ ಅನುಮತಿ ಪಡೆಯುವುದು. ಡೇಟಾಬೇಸ್ ನವೀಕರಣ ಮತ್ತು ಪೂರಕ ಪಟ್ಟಿ ಮುದ್ರಣ | 14–01–2021(ಗುರುವಾರ)ದೊಳಗೆ |
| 8 | ಅಂತಿಮ ಮತದಾರರ ಪಟ್ಟಿ ಪ್ರಕಟಣೆ | 15–1–2021(ಶುಕ್ರವಾರ) |

**ಮತದಾರರ ಸಂಖ್ಯೆ:**

| | **2020 ರಅಂತಿಮ ಮತದಾರರ ಪಟ್ಟಿ** | **ಪ್ರಸ್ತುತಇದ್ದಂತೆ (18–08–2020)** |
|---|---|---|
| **ಪುರುಷರು** | 2,60,15,886 | 2,60,84,374 |
| **ಮಹಿಳೆಯರು** | 2,55,23,227 | 2,56,07,165 |
| **ಇತರರು** | 4709 | 4703 |
| **ಒಟ್ಟು** | 5,15,43,822 | 5,16,96,242 |

**2021ರ ಮತದಾರರ ಪಟ್ಟಿಯಲ್ಲಿ ಹೆಸರು ನೊಂದಾಯಿಸಲು ಬೇಕಾದ ಅರ್ಹತೆಗಳು:–**

- ದಿನಾಂಕ:01–01–2021ಕ್ಕೆ 18 ವರ್ಷ ವಯಸ್ಸನ್ನು ದಾಟುವ ಭಾರತದ ಪ್ರಜೆಗಳು.
- ದಿನಾಂಕ: 02–01–2003ಕ್ಕಿಂತ ಮೊದಲು ಜನಿಸಿರಬೇಕು.
- ವಿಧಾನಸಭಾಕ್ಷೇತ್ರದ ಸಾಮಾನ್ಯ ನಿವಾಸಿಯಾಗಿರಬೇಕು.

**ಮತದಾರರ ವಿವರಗಳ ಪರಿಶೀಲನೆಯ ಉದ್ದೇಶವೇನು?**

ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಮತದಾರರ ಪಟ್ಟಿಯಲ್ಲಿ ಕೆಲವು ನ್ಯೂನತೆಗಳು ಇರುವುದಾಗಿ ಮತ್ತು ಮೃತರಾಗಿರುವ ಹಾಗೂ ವಾಸ ಸ್ಥಳ ಬದಲಾಯಿಸಿರುವ ಹಲವಾರು ವ್ಯಕ್ತಿಗಳ ಹೆಸರು

ಮತದಾರರ ಪಟ್ಟಿಯಲ್ಲಿ ಇರುವುದಾಗಿ ಸುಮಾರು ದೂರುಗಳು ಸ್ವೀಕೃತವಾಗಿದ್ದು, ಮತದಾರರ ಪಟ್ಟಿಯಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸಿ ದೋಷರಹಿತ ಮತದಾರರ ಪಟ್ಟಿಯನ್ನು ಸಿದ್ದಪಡಿಸುವುದು ಮತ್ತು ಈ ಕಾರ್ಯಕ್ರಮದಲ್ಲಿ ಮತದಾರರು ಸಹ ಭಾಗವಹಿಸುವಂತೆ ಮಾಡುವುದುಅವಶ್ಯಕವಾಗಿದೆ.

**ರಾಜಕೀಯ ಪಕ್ಷಗಳಲ್ಲಿ ಮನವಿ:**

1. ಮತಗಟ್ಟೆ ಮಟ್ಟದ ಎಜೆಂಟ್‌ರನ್ನು (BLA) ಪ್ರತಿ ಮತಗಟ್ಟೆಗೆ ನೇಮಿಸಲು ಕೋರಿದೆ.
2. ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ– 2021 ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಲು ಕೋರಿದೆ.
3. ಮೃತರಾಗಿರುವ, ಸ್ಥಳ ಬದಲಾಯಿಸಿರುವ ಅಥವಾ ಹೆಸರು ಪುನಾವರ್ತನೆಗೊಂಡಿರುವ ಅನರ್ಹ ವ್ಯಕ್ತಿಗಳ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕುವ ಪ್ರಕ್ರಿಯೆಯಲ್ಲಿ ರಾಜಕೀಯ ಪಕ್ಷಗಳ ಕಾರ್ಯಕರ್ತರ ಪಾಲ್ಗೊಳ್ಳುವಂತೆ ಕೋರಿದೆ.
4. ಹೊಸ ಮತಗಟ್ಟಗಳ ಅವಶ್ಯಕತೆ ಇದ್ದಲ್ಲಿ, ಸಂಬಂಧ ಪಟ್ಟ ಜಿಲ್ಲಾ ಚುನಾವಣಾಧಿಕಾರಿಗಳ ಮೂಲಕ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಕ್ರಮಕೈಗೊಳ್ಳಲು ಕೋರಿದೆ.

**ಮಾಧ್ಯಮಗಳಲ್ಲಿ ಮನವಿ:**

1. ನಾಗರಿಕರು ಜಾಗೃತಗೊಂಡು ಈಗ ಒದಗಿಸಲಾಗಿರುವ ವಿಶೇಷ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಮತದಾರರ ಪಟ್ಟಿಯಲ್ಲಿ ಅವರ ವಿವರಗಳನ್ನು ಪರಿಶೀಲಿಸಿ, ದೃಢಪಡಿಸುವಂತೆ ವ್ಯಾಪಕ ಪ್ರಚಾರ ನೀಡಬೇಕೆಂದು ಕೋರಲಾಗಿದೆ.
2. ಮಾಧ್ಯಮದವರು ಈ ವಿಶೇಷ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಚುನಾವಣಾ ಆಯೋಗದ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಹಕರಿಸಬೇಕೆಂದು ಕೋರಿದೆ.
3. ಮತದಾರರ ಪಟ್ಟಿಯಲ್ಲಿ ನೋಂದಾಯಿತವಾಗದ ಯುವ ಮತದಾರರನ್ನು ನೋಂದಾಯಿಸುವಂತೆ ಪ್ರೋತ್ಸಾಹಿಸಲು ಕೋರಿದೆ.
4. ಕಾಲೇಜು ಮಟ್ಟದ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಲು ಮತ್ತು ಅವರುಗಳಿಗೆ ಚುನಾವಣೆ ಬಗ್ಗೆ ತಿಳುವಳಿಕೆ ನೀಡಲು ವ್ಯಾಪಕ ಪ್ರಚಾರ ಮಾಡಿ ಅಂತಹ ಮತದಾರರನ್ನು ನೋಂದಾಯಿಸಿಕೊಳ್ಳಲುವಂತೆಯೂ ಸಹ ಪ್ರೋತ್ಸಾಹಿಸಲು ಕೋರಿದೆ.

## Special Summary Revision(SSR) of Photo Electoral Rolls w.r.t. 01.01.2021 as the qualifying date:

**Bengaluru, August 20 (Karnataka Information)**

To ensure free and fair Elections, cleansing of Electoral rolls and an error free Electoral roll is most essential. The Election Commission of India lays special emphasis on enrolling all eligible voters for creating an error free Electoral Rolls.

## Objectives:

1) Every eligible person name should be present in the Electoral Roll
2) All ineligible, dead, repeat and permanently shifted elector names is to be removed after following due procedures.
3) Every details of the voter like – the name, date of birth, photo, address, gender etc shall be correct and complete.

## Schedule:

The Election Commission of India has announced the schedule for Special Summary Revision of Photo Electoral Rolls w.r.t. 01.01.2021 as the qualifying date vide letter No.23/2020-ERS dated 07-08-2020. The programme is as below:-

| S.No. | Activity | Period |
|---|---|---|
| **Pre-revision activities** | | |
| 1. | (i.) Rationalization/Re-arrangements of Polling Stations.<br>(ii.) Removal of discrepancies of DSEs and EPICs (The DSE within part to be removed by 31.08.2020).<br>(iii.)RecastingofSection/Partsandfinalizationofproposed restructuring of section/part boundaries location of polling | 10.08.2020 (Monday) to 31.10.2020 (Saturday) |

| | | |
|---|---|---|
| | stationsandgettingapprovaloflistofpollingstations. | |
| 2. | (i) Preparation of Format 1 to 8.<br>(ii) Preparation of Supplements and integrated draft roll | 01.11.2020 (Sunday) to 15.11.2020 (Sunday) |
| **Revision Activities** | | |
| 3. | Publication of Integrated draft electoral roll. | 16.11.2020 (Monday) |
| 4. | Period for filing claims & objections | 16.11.2020 (Monday) to 15.12.2020 (Tuesday) |
| 5. | Special campaign dates | Two Saturdays and Sundays within claims and objections period to be prescribed by the CEO |
| 6. | Disposal of claims and objections | By 05.01.2021(Tuesday) |
| 7. | (i.) Checking of health parameters and obtaining Commission's permission for final publication<br>(ii.) Updating database and printing of supplements | By 14.01.2021 (Thursday) |
| 8. | Final publication of electoral roll | 15.01.2021 (Friday) |

## <u>Voters Information:</u>

| | SSR 2020 Final Electoral Roll: | As on 18.08.2020 |
|---|---|---|

| | | |
|---|---|---|
| **Male:** | 2,60,15,886 | 2,60,84,374 |
| **Female:** | 2,55,23,227 | 2,56,07,165 |
| **Others:** | 4,709 | 4,703 |
| **Total:** | 5,15,43,822 | 5,16,96,242 |

## Eligibility for inclusion in Electoral Rolls, 2021:

1) Any citizen who has crossed 18 years of age as on 1st January 2021.
2) Should have born before 2nd January 2003.
3) Should be an ordinary resident in the constituency.

## Objectives of Electoral roll verification:

During the General Elections, it had come to our observation that there were few discrepancies in Electoral Rolls concerning few dead and translocated voters. Hence, as it is essential that and error free Electoral rolls be prepared after the due cleansing activities, participation of the eligible voters is hereby emphasized.

## Appeal to all Political Parties:

1) Request to appoint BLAs for every polling station.
2) Request to actively participate in the activities related to Special Summary Revision 2021.
3) Request to motivate all your party members to get themselves involved in identifying and informing the details of dead, permanently shifted and repeat entries for deletion.
4) If there is need for creation of new polling stations, the Political Parties are requested to approach the concerned District Election Officer and make the representation.

## Appeal to the Press:

1. To provide wide publicity and awareness among Citizens for utilizing this opportunity to enrol and ensure that Electoral rolls is updated.
2. The Media is requested to actively get involved in this Special Summary Revision activities so that the enrolment activity program of the Election Commission of India is successfully implemented.
3. To support in enrolling the young voters who are eligible to be enrolled in the Electoral roll
4. To support in creating awareness among the College Students and educating them with regard to the Election process and thereby encouraging them to get enrolled.

**PROPOSALS ARE INVITED FROM REPUTED EDUCATIONAL INSTITUTIONS FOR CONDUCTING '11 MONTHS SPECIAL COACHING SCHEME' FOR SC/ST JOB SEEKERS IN BENGALURU**

**Bengaluru, August 20 (Karnataka Information)**

**National Career Service Centre for SC/STs, Bengalurua Subordinate office under Directorate General of Employment ,Ministry of Labour & Employment, Government of India**, invites Proposalsin Sealed Cover from Reputed Educational Institutions to run **11 Months Special Coaching Scheme for 60 SC/ST Candidates**, Subjects to be trained are **General English, Numerical Ability, General Awareness, Reasoning, Computer Proficiency& Shorthand(Stenography)**.**Professional Charge of Rs. 800/- per month per trainee will be paid to the selected Institution**. The **Scheme** is proposed to **Commence from 01 September 2020. Last Date of Receiving proposals to the undersigned in Sealed Cover is 25/08/2020 till 5.00 P.M .**

**Eligibility Criteria:**
The Institution applying for participating in this scheme needs to meet the following criteria:

**1**.The institutions must be **recognized** by authorities like **Central Government**, **State Government**, **NCVT** or **State Public Welfare Department**. Copies of such recognition to be provided along with the proposal.**2.Experience of three years in education, training and coaching of students for competitive exams3**.Adequate infrastructure to train students in the areas specified **4.**The institution must have **annual audited turnover during the last three years** and also have a **TAN/PAN Number**&**Bank Account Number**.**5**.Preference will be given to institutions having trained counselors and **good industry interface for placements**.**6**.Preference will be given to institutions that have commitment for the welfare and development of weaker section of the society.**7**.**The Institution must be registered on the NCS Portal (www.ncs.gov.in)** as a training provider.**8**.**The Institution should be located in Bengaluru city**an area which is easily accessible through public transport.

**Faculty:The faculty members should be professionally qualified Instructors (B. Ed, PGT etc.)** to teach General English, General Knowledge/Awareness, Typing and Shorthand & Computer operations having good academic background and experience in teaching and also having **experience** of carrying out similar task for a **minimum period of three years**. These courses are to be run by at least three separate faculty members whose details are to be provided along with the proposal

**<u>Training Infrastructure</u>:**The institution must have the following infrastructure in the location/premises where the training is proposed to be imparted.**i)Classrooms etc.:** The institution should have adequate number of classroomswith other infrastructural facilities like Boards, chairs, tables, fans, light, etc. The classrooms should be well lit (good lighting), ventilated, power backup etc for conducting coaching classes to accommodate 60 trainees/students for the course duration.**ii)Computer/IT Facilities:**Desktops, printers, broadband internet connectivity etc in good working condition. The computer to student's ratio should be on a 1:1 basis.**iii)Library facilities:** The Institution should have a well-equipped library withbooks and reference material for competitive examinations**iv)Water and sanitation facilities:** The Institution should have adequate water andsanitation facilities with separate clean toilets for males and females.

**Feel Free to Contact through Telephone/ E-mail for more Details**

**(Shivashantaveer Diwakar)**
Sub Regional Employment Officer
**(080-29756192,9916188914)**

# Elephant named Suvarna gave birth to female calf

**<u>Bengaluru, August 20 (Karnataka Information)</u>**

Bengaluru Bannerghatta Biological Park is happy to announce that the elephant named Suvarna (aged 45) gave birth to female calf on 17 August 2020. Both the mother and calf are healthy and doing well. With the addition of this calf, the present elephant population is twenty five at the Bengaluru Bannerghatta Biological Park.

Bengaluru Bannerghatta Biological Park (BBBP) has also been continuously supporting the Karnataka Forest Department with respect to Rescue and Rehabilitation of wild animals.
A recent Rescue and Rehabilitation
1) Indian Gaur -A one-and-a-half year old female sub adult gaur was found on 17th August in a farmland in Keralusandra village in Kodihalli Wildlife Range. Local farmers observed that the animal was dull, and immobile. Hence, it was brought to the notice of forest officials. Deputy Conservator of Forests (BNP) intimated the BBBP veterinary teams who rushed to the animal's rescue.

The gaur was examined at the spot and it was observed that the animal had a fracture at its right forelimb at the carpal region due to which it was not able to bear the weight on the affected leg. Hence, it was tranquilized and shifted to the Bannerghatta zoo hospital for further treatment, on 17 August.

Currently, the animal is under observation in the zoo hospital. However, the prognosis of the condition is guarded.

2) Sloth Bear – Further, on 18 August, a male sub adult sloth bear was found trapped in a snare to its neck region, near Kadina Kuppe village in Ramanagara Range.

Upon intimation by the Deputy Conservator of Forests, Ramanagar , the BBBP veterinary team rushed to the spot. The animal was sedated and freed from the snare and health examination was carried out. Since the animal was found healthy , it was immediately released back to the forest near Ramanagara.

## ಸದ್ಭಾವನಾ ದಿನಾಚರಣೆ ಪ್ರತಿಜ್ಞೆ

**ಬೆಂಗಳೂರು, ಆಗಸ್ಟ್ 20 (ಕರ್ನಾಟಕ ವಾರ್ತೆ)**

ಮಾಜಿ ಪ್ರಧಾನಿ ದಿ: ರಾಜೀವ್ ಗಾಂಧಿ ಹಾಗೂ ಅವರ ಜನ್ಮ ದಿನಾಚರಣೆ ಅಂಗವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಇಂದು ಸದ್ಭಾವನಾ ಪ್ರತಿಜ್ಞೆ ಕೈಗೊಳ್ಳಲಾಯಿತು.

ಜಾತಿ, ಧರ್ಮ, ಪ್ರದೇಶ, ಮತ ಅಥವಾ ಭಾಷೆಯ ಭೇಧಭಾವವಿಲ್ಲದೇ ಭಾರತದ ಎಲ್ಲ ಜನತೆಯ ಭಾವೈಕ್ಯ ಮತು ಸೌಹಾರ್ದಕ್ಕಾಗಿ ಕಾರ್ಯ ನಿರ್ವಹಿಸುತ್ತೇನೆಂದು ನಾನು ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೆ, ವೈಯುಕ್ತಿಕವಾಗಿಯಾಗಲೀ ಅಥವಾ ಸಾಮೂಹಿಕವಾಗಿಯಾಗಲೀ ನಮ್ಮಲ್ಲಿರುವ ಎಲ್ಲ ಬೇಧಭಾವಗಳನ್ನು ಹಿಂಸಾಚಾರಕ್ಕೆ ಅವಕಾಶ ನೀಡದೆ ಸಮಾಲೋಚನೆ ಹಾಗೂ ಸಂವಿಧಾನಾತ್ಮಕ ಕ್ರಮಗಳ ಮೂಲಕ ಪರಿಹರಿಸುತ್ತೇನೆಂದು ಸಹ ಪ್ರತಿಜ್ಞೆ ಮಾಡುತ್ತೇನೆ ಎಂದು ಇಲಾಖೆಯ ಎಲ್ಲ ಅಧಿಕಾರಿಗಳು ಹಾಗೂ ನೌಕರರುಗಳು ಪ್ರತಿಜ್ಞೆಯನ್ನು ಕೈಗೊಂಡರು.

ಈ ಸಂದರ್ಭದಲ್ಲಿ ಆಡಳಿತ ವಿಭಾಗದ ಜಂಟಿ ನಿರ್ದೇಶಕರಾದ ಡಿ.ಪಿ.ಮುರಳೀಧರ್ ಅವರು ಪ್ರತಿಜ್ಞಾವಿಧಿ ಬೋಧಿಸಿದರು. ಜಂಟಿ ನಿರ್ದೇಶಕರಾದ ಎ.ಆರ್.ಪ್ರಕಾಶ್ ಅವರು ಸೇರಿದಂತೆ ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಪ್ರತಿಜ್ಞಾವಿಧಿ ಸ್ವೀಕರಿಸಿದರು.

## ಸಚಿವರ ಪ್ರವಾಸ

**ಬೆಂಗಳೂರು, ಆಗಸ್ಟ್ 20 (ಕರ್ನಾಟಕ ವಾರ್ತೆ)**

ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಕೆ. ಗೋಪಾಲಯ್ಯ ಅವರು ಆಗಸ್ಟ್ 21 ರಂದು ಹಾಸನ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಪ್ರಕಟಣೆ ತಿಳಿಸಿದೆ.

# ದತ್ತು ಸ್ವೀಕಾರ

**ಬೆಂಗಳೂರು, ಆಗಸ್ಟ್ 20 (ಕರ್ನಾಟಕ ವಾರ್ತೆ):**

ಖ್ಯಾತ ಕನ್ನಡ ಚಲನಚಿತ್ರ ನಟ ಡಾ: ಶಿವರಾಜ್‌ಕುಮಾರ್ ಅವರು 75,000/– ಗಳನ್ನು ಪಾವತಿಸಿ ಮೈಸೂರು ಮೃಗಾಲಯದ "ಭಾರತದ ಆನೆ (ಪಾರ್ವತಿ)ಯನ್ನು ದತ್ತು ಸ್ವೀಕಾರವನ್ನು ಮುಂದಿನ ಒಂದು ವರ್ಷದ ಅವಧಿಗೆ ಮಾಡಿರುತ್ತಾರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸದ್ಭಾವನ ದಿನ

## ಮುಖ್ಯಮಂತ್ರಿ ಬಿ.ಎಸ್. ಯಡಿಯೂಪ್ಪ ಅವರು ಪ್ರತಿಜ್ಞಾವಿಧಿ ಭೋಧನೆ

**ಬೆಂಗಳೂರು,ಆಗಸ್ಟ್ 20(ಕರ್ನಾಟಕ ವಾರ್ತೆ):**

ವಿಧಾನ ಸೌಧದಲ್ಲಿ  ಸಮ್ಮೇಳನ ಸಭಾಂಗಣದಲ್ಲಿ ಇಂದು ಏರ್ಪಡಿಸಿದ್ದ ಸದ್ಭಾವನಾ ದಿನದ ಅಂಗವಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂಪ್ಪ ಅವರು ಪ್ರತಿಜ್ಞಾವಿಧಿ ಭೋಧಿಸಿದರು.

ಜಾತಿ, ಧರ್ಮ, ಪ್ರದೇಶ ಮತ ಅಥವಾ ಭಾಷೆಯ ಬೇದಭಾವ ಇಲ್ಲದೆ ದೇಶದ ಎಲ್ಲಾ ಜನತೆಯ ಭಾವೈಕ್ಯ ಮತ್ತು ಸೌಹಾರ್ಧಕ್ಕಾಗಿ ಕಾರ್ಯನಿರ್ವಹಿಸುತ್ತೇನೆಂದು ಪ್ರತಿಜ್ಞೆ ಭೋಧಿಸಿದರು.

ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಮುಖ್ಯಮಂತ್ರಿಯವರ ಕಾರ್ಯದರ್ಶಿ ರವಿಕುಮಾರ್, ಸರ್ಕಾರದ ಹಿರಿಯ ಅಧಿಕಾರಿಗಳು ಹಾಗೂ ಸಚಿವಾಲಯದ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸಾರ್ಥಕ ಸಾಧನೆಯ ಒಂದು ವರ್ಷ

## "ಸಾರಿಗೆ ಮಿತ್ರ "ಪುಸ್ತಕ ಬಿಡುಗಡೆ

**ಬೆಂಗಳೂರು, ಆಗಸ್ಟ್ 20 (ಕರ್ನಾಟಕ ವಾರ್ತೆ):**

ಸಾರಿಗೆ ಇಲಾಖೆಯಲ್ಲಿ ಕಳೆದ ಒಂದು ವರ್ಷದಲ್ಲಿ ಹಲವು ನೂತನ ಸಾಧನೆಗಳನ್ನು ಕೈಗೊಳ್ಳಲಾಗಿದ್ದು, ಉಪ ಮುಖ್ಯಮಂತ್ರಿ ಹಾಗೂ ಸಾರಿಗೆ ಸಚಿವ ಲಕ್ಷ್ಮಣ ಸವದಿ ಅವರ ನೇತೃತ್ವದಲ್ಲಿ ಕೈಗೊಳ್ಳಲಾದ ಹಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಒಳಗೊಂಡ ಪುಸ್ತಕವನ್ನು ಇಂದು ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಏರ್ಪಡಿಸಿದ್ದ ಸರಳ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿ ಹಾಗೂ ಸಾರಿಗೆ ಸಚಿವ ಲಕ್ಷ್ಮಣ ಸವದಿ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್, ಬಿ.ಎಂ.ಟಿ.ಸಿ. ಅಧ್ಯಕ್ಷ ಮಾಜಿ ಶಾಸಕ ನಂದೀಶ್ ರೆಡ್ಡಿ ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅಂಜುಂ ಫರ್ವೇಜ್, ಕೆ.ಎಸ್.ಆರ್.ಟಿ.ಸಿ. ವ್ಯವಸ್ಥಾಪಕ ನಿರ್ದೇಶಕ ಶಿವಯೋಗ ಕಳಸದ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ರೈತರ ಮನೆಬಾಗಿಲಿಗೆ ಪಶು ಸಂಜೀವಿನಿ

**ಬೆಂಗಳೂರು, ಆಗಸ್ಟ್ 20 (ಕರ್ನಾಟಕ ವಾರ್ತೆ):** ಕರ್ನಾಟಕದಲ್ಲಿ ಮೊಟ್ಟಮೊದಲ ಬಾರಿಗೆ ಇದನ್ನು ಜಾರಿಗೆ ತರಲಾಗುತ್ತಿದ್ದು ಜಾನುವಾರುಗಳ ಆರೋಗ್ಯ ರಕ್ಷಣೆಗೆ ಸರ್ಕಾರ ಸಜ್ಜಾಗಿದ್ದು, ರೈತರ ಕರೆಗಳಿಗೆ ತುರ್ತಾಗಿ ಸ್ಪಂದಿಸಿ ಕಾರ್ಯ ನಿರ್ವಹಿಸಲಿದೆ. ಈ ಸೇವೆಗಳನ್ನು ಇಲಾಖೆಯ ಸಹಾಯವಾಣಿ ಸೇವೆಗಳಿಗೆ ಲಿಂಕ್ ಮಾಡಿ 24*7 ಜಾನುವಾರುಗಳ ರಕ್ಷಣೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಿಳಿಸಿದರು.

ಇಂದು ವಿಧಾನ ಸೌಧದ ಪೂರ್ವದ್ವಾರದ ಮೆಟ್ಟಿಲುಗಳ ಬಳಿ ಪಶುಸಂಗೋಪನಾ ಇಲಾಖೆಯ ವತಿಯಿಂದ ಆಯೋಜಿಸಿದ್ದ "ಪಶುಸಂಜೀವಿನಿ" ಸುಸಜ್ಜಿತ ಸಂಚಾರಿ ಪಶುಶಸ್ತ್ರ ಚಿಕಿತ್ಸಾ ವಾಹನಗಳಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಜಾನುವಾರುಗಳಿಗೆ ತುರ್ತು ಚಿಕಿತ್ಸೆ ನೀಡುವ ಸಲುವಾಗಿ 15 ಜಿಲ್ಲೆಗಳಿಗೆ 2 ಕೋಟಿ ಅನುದಾನದಲ್ಲಿ ಸುಸಜ್ಜಿತ ವಾಹನ ಸೌಲಭ್ಯ ಒದಗಿಸಲಾಗಿದೆ. ರೈತರಿಗೆ, ಪಶುಪಾಲಕರಿಗೆ, ಸಾರ್ವಜನಿಕರಿಗೆ ತ್ವರಿತಗತಿಯಲ್ಲಿ ಪರಿಣಾಮಕಾರಿಯಾಗಿ ಪಶುವೈದ್ಯಕೀಯ ಸೇವೆ ತಲುಪಿಸುವುದು ಯೋಜನೆಯ ಗುರಿ. ರೈತರ ಮನೆಬಾಗಿಲಿಗೆ ತಜ್ಞಪಶು ವೈದ್ಯಕೀಯ ಸೇವೆ ಸಲ್ಲಿಸುವ ಯೋಜನೆ ಕಾರ್ಯರೂಪ ಬರಲಿದೆ. ಪಶುಚಿಕಿತ್ಸಾ ವಾಹನದಲ್ಲಿ

ಅತ್ಯಾಧುನಿಕ ಸುಸಜ್ಜಿತವಾದ ವ್ಯವಸ್ಥೆ ಹೊಂದಿದ್ದು ವಿಶೇಷವಾದ ಪಶುಸೇವಾ ಸೌಲಭ್ಯಗಳು ತ್ವರಿತವಾಗಿ ದೊರೆಯಲಿದೆ.

ಈ ವಾಹನದಲ್ಲಿ ಶಸ್ತ್ರಚಿಕಿತ್ಸಾ ಘಟಕ, ಪ್ರಯೋಗಶಾಲೆ, ಸ್ಕ್ಯಾನಿಂಗ್, ತುರ್ತು ಚಿಕಿತ್ಸಾ ಘಟಕ ಸೇರಿದಂತೆ ಪಶುಗಳಿಗೆ ವಿವಿಧ ಆರೋಗ್ಯ ಸೇವೆಗಳು ಲಭ್ಯವಾಗಲಿದೆ. ಈ ಸೇವೆಯನ್ನು ಇಲಾಖೆಯ ಸಹಾಯವಾಣಿ ಸೇವೆಗಳಿಗೆ ಲಿಂಕ್ ಮಾಡಿ 24 x 7 ಜಾನುವಾರುಗಳ ರಕ್ಷಣೆಗೆ ಉದ್ದೇಶಿಸಲಾಗಿದೆ. ಸದರಿ ಪಶುವೈದ್ಯಕೀಯ ಆಂಬುಲೆನ್ಸ್ ಸೇವೆಯನ್ನು ಪಶುಪಾಲಕರ ಸಹಾಯವಾಣಿ ಸಂಖ್ಯೆ 1962 ಸಂಯೋಜಿಸಿ ಅವಶ್ಯಕ ಮತ್ತು ತುರ್ತು ಸವಿವೆ ನೀಡಲು ಕ್ರಮವಹಿಸಲಾಗಿದೆ.

ಪಶು ಶಸ್ತ್ರಚಿಕಿತ್ಸಾ ವಾಹನವನ್ನು ಉಪಯೋಗಿಸಿಕೊಂಡು ಜಿಲ್ಲೆಯಾದ್ಯಂತ ವಾರದಲ್ಲಿ 1 ದಿನ ಪಶುವೈದ್ಯಕೀಯ ಶಸ್ತ್ರಚಿಕಿತ್ಸಾ ತಜ್ಞರು ಮತು ಪ್ರಸೂತಿ ತಜ್ಞರು ಬರಡುರಾಸುಗಳ ಚಿಕಿತ್ಸಾ ಶಿಬಿರ ಮತ್ತು ಅನುಪಾಲನಾ ಶಿಬಿರಗಳಲ್ಲಿ ಭಾಗವಹಿಸಿ ತಜ್ಞ ಪಶುವೈದ್ಯಕೀಯ ಸೇವೆಯನ್ನು ಒದಗಿಸುತ್ತಾರೆ.

ರೈತರಿಗಾಗಿ ಪಶುಸ್ನೇಹಿ ಯೋಜನೆ ಇಲಾಖೆಯಿಂದ ಇನ್ನಷ್ಟು ಜರಿಗೆ ತರಲಾಗುತ್ತದೆ. ಈಗ 15 ಜಿಲ್ಲೆಗಳಿಗೆ ವಿತರಣೆ ಮಾಡಲಾಗುತ್ತದೆ. ಉಳಿದ ಜಿಲ್ಲೆಗಳಿಗೆ ಆದಷ್ಟು ಬೇಗ ಈ ವಾಹನದ ವ್ಯವಸ್ಥೆ ಮಾಡುತ್ತೇನೆಂದು ನುಡಿದರು. ರೈತರು ಈ ಸೌಲಭ್ಯವನ್ನು ಸದುಪಯೋಗಪಡಿಸಬೇಕೆಂದು ತಿಳಿಸಿದರು.

ಕೃಷಿ ಹಾಗೂ ಪಶುಸಂಗೋಪನೆ ಗ್ರಾಮೀಣ ಪ್ರದೇಶ ಆರ್ಥಿಕ ಅಭಿವೃದ್ಧಿಯಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿರುತ್ತದೆ. ಪಶುಸಂಗೋಪನೆ ರೈತರ ಆದಾಯ ಹೆಚ್ಚಿಸುವ ಮಹತ್ವದ ನಿವಹಿಸುತ್ತದೆ. ರಾಜ್ಯದ ಕೃಷಿ ಜಿಡಿಪಿಯಲ್ಲಿ ಪಶುಸಂಗೋಪನೆ ಪ್ರಮುಖ ಪಾತ್ರವಹಿಸುತ್ತದೆ. ಶೇ 20.07 ರಷ್ಟು ಒಟ್ಟಾರೆ ಜಿಡಿಪಿಯಲ್ಲಿ 2.03 ಆಗಿದೆ. ಗ್ರಾಮೀಣ ಪ್ರದೇಶದ ಜನರು ವ್ಯವಸಾಯ ಮತ್ತು ಪಶುಸಂಗೋಪನೆಯನ್ನು ಹೆಚ್ಚಾಗಿ ಅವಲಂಭಿಸಿದ್ದು ಜಾನುವಾರುಗಳ ಆರೋಗ್ಯ ರಕ್ಷಣೆ ಕಡೆ ಹೆಚ್ಚಿನ ಮಹತ್ವ ನೀಡಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಉಪ ಮುಖಮುಖ್ಯಮಂತ್ರಿ ಲಕ್ಷ್ಮಣ ಸವಧಿ, ಪಶುಸಂಗೋಪನಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕ್ಯಾಪ್ಟನ್ ಮಣಿವಣ್ಣನ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ದಿ.ಡಿ.ದೇವರಾಜ ಅರಸುರವರ ಜನ್ಮದಿನಾಚರಣೆ

**ಬೆಂಗಳೂರು, ಆಗಸ್ಟ್ 20 (ಕರ್ನಾಟಕ ವಾರ್ತೆ):**

ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸುರವರ 105ನೆ ಜನ್ಮದಿನೋತ್ಸವದ ಪ್ರಯುಕ್ತ ಮುಖ್ಯಮಂತ್ರಿ ಯಡಿಯೂರಪ್ಪ ಅವರು ವಿಧಾನಸೌಧದ ಆವರಣದಲ್ಲಿರುವ ಅವರ ಪ್ರತಿಮೆಯ ಮುಂಭಾದಗಲ್ಲಿರಿಸಿದ್ದ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಸಲ್ಲಿಸಿದರು.

ಇಂದು ನಡೆದ ಸರಳ ಸಮಾರಂಭದಲ್ಲಿ ಮಾಲಾರ್ಪಣೆಯ ನಂತರ ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿಯವರು ಜನಸಾಮಾನ್ಯರ ಬಗ್ಗೆ ದೇವರಾಜ ಅರಸುರವರಿಗೆ ಇದ್ದ ಕಾಳಜಿ ದೂರದೃಷ್ಟಿ ಆಡಳಿತ ನಿರ್ಧಾರಗಳು ರಾಜ್ಯದಲ್ಲಿ ಕ್ರಾಂತಿಕಾರಿ ಬದಲಾವಣೆ ತರಲು ಸಾಧ್ಯವಾಯಿತು. ಎಂಟು ವರ್ಷಗಳ

ಮುಖ್ಯಮಂತ್ರಿಯಾಗಿದ್ದ ಅರಸು ಅವರು ತಮ್ಮ ಆಡಳಿತ ವೈಖರಿಯಿಂದ ಸ್ವತಂತ್ರ ಭಾರತದ ಇತಿಹಾಸದಲ್ಲಿ ಅಜಾರಮರಾಗಿದ್ದಾರೆ. ಅವರ ಕಾಲವನ್ನು ಅರಸು ಯುಗವೆಂದೆ ಪ್ರತಿಯೊಬ್ಬ ಕನ್ನಡಿಗ ಕಾಣುತ್ತಾನೆ. ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ದುರ್ಬಲರಾದವರಿಗೆ ಆಸರೆ ಆಗುವ ಪರಿಣಾಮ ನೀತಿಗಳನ್ನು ಅನುಷ್ಠಾನಕ್ಕೆ ತಂದಿದ್ದರು ಎಂದು ಹೇಳಿದರು.

ದುರ್ಬಲ ವರ್ಗದವರು ಹಾಗೂ ಶೋಷಿತರು ಅನುಭವಿಸುತ್ತಿದ್ದ ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳನ್ನು ನಿವಾರಿಸಲು ಮಹತ್ವದ ಸುಧಾರಣೆಗಳನ್ನು ಜಾರಿಗೆ ತರುವ ಮೂಲಕ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಿದ ಧೀಮಂತ ವ್ಯಕ್ತಿ

ಉಳುವವನೆ ಭೂಮಿಯ ಒಡೆಯ ಎಂಬ ಕಾನೂನನ್ನು ಪರಿಣಾಮಕಾರಿಯಾಗಿ ಅನುಷ್ಟಾನಕ್ಕೆ ತಂದು ಲಕ್ಷಾಂತರ ಜನರ ಬದುಕನ್ನು ಬೆಳಗಿದವರು. ಆವನೂರು ವರದಿ ಜಾರಿಗೆ ತಂದು ಸಾಮಾಜಿಕ ಮತ್ತು ರಾಜಕೀಯ ಮುನ್ನೋಟಕ ದಾರ್ಶನಿಕ ವ್ಯಕ್ತಿ ಎಂದು ನಿರೂಪಿಸಿದರು. ನವಸಮಾಜದ ನಿರ್ಮಾಣಕ್ಕೆ ಶಿಕ್ಷಣವೆ ಕಾರಣ. ಪ್ರತಿಯೊಬ್ಬ  ಹಿಂದುಳಿದವರ ಮಕ್ಕಳಿಗೆ ಶಿಕ್ಷಣ ನೀಡಲು ಉದ್ದೇಶಿಸಿ ಬಡವರಿಗಾಗಿ ವಸತಿ ನಿಲಯ ಒಳಗೊಂಡ ಶಾಲೆಗಳ ಸ್ಥಾಪನೆಗೆ ಅತಿ ವಿಶೇಷ ಮಹತ್ವ ಕೊಟ್ಟಿದ್ದರು.  ಜೀತ ಪದ್ಧತಿ ನಿರ್ಮೂಲನೆ ಸಂಪೂರ್ಣವಾಗಿ ನಿಷೇಧ ಮಾಡಿದ ಅರಸು ದುರ್ಬಲ ವರ್ಗದ ಜನರಿಗೆ ದೊರಕಿಸಿ ಕೊಟ್ಟ ಆತ್ಮವಿಶ್ವಾಸ ಬಲ ಬಹಳ ದೊಡ್ಡದು ಎಂದು ತಿಳಿಸಿದರು.

ಏಕೀಕರಣದ ಚಳುವಳಿ ಮಹತ್ವವನ್ನು ಮನಗಂಡಿದ ಅರಸು ಅವರು ಮೈಸೂರು ರಾಜ್ಯಕ್ಕೆ ಕರ್ನಾಟಕವೆಂದು ಮರುನಾಮಕರಣ ಮಾಡುವ ಮೂಲಕ ರಾಜ್ಯದ ಜನರ ಅಖಂಡ ಕರ್ನಾಟಕದ ಕನಸನ್ನು ನನಸು ಮಾಡಿದರು. ಅವರು ಸಮಗ್ರ ಕರ್ನಾಟಕದ ಮುನ್ನುಡಿಗೆ ಕನಸು ಕಂಡವರು. ಅವರ ಕನಸನ್ನು ನನಸು ಮಾಡುವುದು ಹೊಣೆ ನಮ್ಮ ಮೇಲಿದೆ ಅವರ ಚಿಂತನೆ ಮೌಲ್ಯ ನಮ್ಮ ದಾರಿ ದೀಪ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಗೋವಿಂದ ಎಂ. ಕಾರಜೋಳ, ಸಚಿವರುಗಳಾದ ಎಸ್.ಟಿ. ಸೋಮಶೇಖರ್, ವಿ. ಸೋಮಣ್ಣ, ಭೈರತಿ ಬಸವರಾಜು, ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ಅವರು ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಉಪ ಸಭಾಪತಿ ಪ್ರವಾಸ

**ಬೆಂಗಳೂರು, ಆಗಸ್ಟ್ 20 (ಕರ್ನಾಟಕ ವಾರ್ತೆ):**

ಕರ್ನಾಟಕ ವಿಧಾನ ಪರಿಷತ್ ಉಪ ಸಭಾಪತಿ ಎಸ್.ಎಲ್. ಧರ್ಮೇಗೌಡ ಅವರು ಆಗಸ್ಟ್ 24 ರಂದು  ಚಿಕ್ಕಮಗಳೂರು ಜಿಲ್ಲೆಗೆ ಪ್ರವಾಸ ಕೈಗೊಂಡು ಅತಿವೃಷ್ಟಿ ಪ್ರದೇಶಗಳಿಗೆ ಭೇಟಿ ನೀಡುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# ಅಗ್ರಿ ಸ್ಟಾರ್ಟಪ್ ಸಮ್ಮೇಳನ

ಬೆಂಗಳೂರು, ಆಗಸ್ಟ್ 20 (ಕರ್ನಾಟಕ ವಾರ್ತೆ):

ಭಾರತದ ಸ್ಟಾರ್ಟಪ್ ಹಬ್ ಆಗಿ ರೂಪಗೊಳ್ಳುತ್ತಿರುವ ಕರ್ನಾಟಕದಲ್ಲಿ ಕೃಷಿ ಕ್ಷೇತ್ರದ ಹೊಸ ಸಾಧ್ಯತೆಗಳು ಹಾಗೂ ಹೊಸ ತಲೆಮಾರಿನ ಕೃಷಿ ಕ್ಷೇತ್ರದ ಉದ್ಯಮಶೀಲತೆಯನ್ನು ಕುರಿತು ಚಿಂತನ ಮಂತನ ನಡೆಸಲು ಬೆಂಗಳೂರಿನಲ್ಲಿ ಆಗಸ್ಟ್ 21 ರಂದು ಕೃಷಿ ಸ್ಟಾರ್ಟಪ್ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಅವರು ತಿಳಿಸಿದರು.

ಇಂದು ವಿಕಾಸ ಸೌಧದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸಚಿವರು ವರ್ಚುವಲ್ ಮೋಡ್ ಆನ್‌ಲೈನ್ ಮೂಲಕ ನಡೆಯಲಿರುವ ಈ ಕಾರ್ಯಾಗಾರದಲ್ಲಿ ಪ್ರಮುಖವಾಗಿ ಸಾವಯವ ಹಾಗೂ ಸಿರಿಧಾನ್ಯಗಳು, ಆಹಾರ ಸಂಸ್ಕರಣ ಉದ್ಯಮಗಳ ವ್ಯಾಪ್ತಿ ಹಾಗೂ ಅವಕಾಶಗಳು, ಆಧುನಿಕ ತಂತ್ರಜ್ಞಾನ ಆಧರಿತ ಕೃಷಿ ಕುರಿತು ಚರ್ಚಿಸುವುದು  ಈ ಕಾರ್ಯಾಗಾರದ ಉದ್ದೇಶ ಎಂದು ಹೇಳಿದರು.

ಈ ಸಮ್ಮೇಳನದಲ್ಲಿ  ರಾಜ್ಯ ಹಾಗೂ ವಿವಿಧ ಭಾಗಗಳ 100 ಕ್ಕೂ ಹೆಚ್ಚು ಕೃಷಿ ಸ್ಟಾರ್ಟಪ್ ಉದ್ದಿಮೆಗಳು, ಹೂಡಿಕೆದಾರರು ಭಾಗವಹಿಸಲಿದ್ದಾರೆ.  ಪ್ರಸ್ತುತ ದೇಶದಲ್ಲಿ ಕಳೆದ ಹತ್ತು ವರ್ಷಗಳಿಂದ ಸುಮಾರು ಆರು ಬಿಲಿಯನ್ ಡಾಲರ್ ಬಂಡವಾಳವನ್ನು ಸ್ಟಾರ್ಟಪ್‌ಗಳಲ್ಲಿ ಹೂಡಿಕೆ ಮಾಡಲಾಗಿದೆ.

2020ನೇ ಸಾಲಿನ 73 ಲಕ್ಷ ಹೆಕ್ಟರ್ ಈ ಬಾರಿ ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಗುರಿ ಹೊಂದಲಾಗಿದ್ದು, ಜೂನ್ 10 ರಿಂದ ಆಗಸ್ಟ್ 19 ರವರೆಗೆ 68.26 ಲಕ್ಷ ಹೆಕ್ಟರ್ ಶೇ.95% ರಷ್ಟು ಬಿತ್ತನೆಯಾಗಿದೆ. ಏಪ್ರಿಲ್ 1 ರಿಂದ ಆಗಸ್ಟ್ 2020 ರವರೆಗೆ 6,78,055 ಯೂರಿಯಾ ಗೊಬ್ಬರಕ್ಕೆ ಬೇಡಿಕೆಯಿದ್ದು, 4,88,163 ಮೆಟ್ರಿಕ್ ಟನ್ ಪೂರೈಕೆಯಾಗಿದ್ದು, ಕಳೆದ ಬಾರಿಗಿಂತ ಆರಿ 1,89,892 ಮೆಟ್ರಿಕ್ ಟನ್ ಯೂರಿಯಾ ಹೆಚ್ಚಿಗೆ ಸರಬರಾಜಾಗಿದೆ.

ಏಪ್ರಿಲ್ 2020 ರಿಂದ ಆಗಸ್ಟ್ ಅಂತ್ಯದವರೆಗೆ 18,23,000 ಮೆಟ್ರಿಕ್ ಟನ್ ವಿವಿಧ ಗ್ರೇಡ್‌ಗಳ ರಸಗೊಬ್ಬರಕ್ಕೆ ಬೇಡಿಕೆಯಿದ್ದು, ಆಗಸ್ಟ್ 20 ರವರೆಗೆ ಅಂದರೆ ಇಂದಿನವರೆಗೆ 17,96,668 ಮೆಟ್ರಿಕ್ ಟನ್ ಪ್ರಮಾಣ ಸರಬರಾಜಾಗಿರುತ್ತದೆ.

ಆಗಸ್ಟ್ ಮಾಹೆಯಲ್ಲಿ 1,77,000 ಮೆಟ್ರಿಕ್ ಟನ್ ಪ್ರಮಾಣದ ಯೂರಿಯಾ ರಸಗೊಬ್ಬಕ್ಕೆ ಬೇಡಿಕೆಯಿಕದ್ದು ಇಲ್ಲಿಯವರೆಗೆ 1,14,194 ಮೆಟ್ರಿಕ್ ಟನ್ ಪ್ರಮಾಣದಲ್ಲಿ ರಸಗೊಬ್ಬರ ಸರಬರಾಜು ಹಂತದಲ್ಲಿರುತ್ತದೆ.

ಜುಲೈ ತಿಂಗಳಿನಲ್ಲಿ 35,000 ಮೆಟ್ರಿಕ್ ಪ್ರಮಾಣದ ಯೂರಿಯಾ ರಸಗೊಬ್ಬರ ಕಡಿಮೆ ಸರಬರಾಜಾರಿರುತ್ತದೆ. ರಾಜ್ಯದಲ್ಲಿ ಲಭ್ಯವಿದ್ದ 50,000 ಮೆಟ್ರಿಕ್ ಟನ್ ಕಾಪು ದಾಸ್ತಾನಿನಿಂದ ರಾಜ್ಯದ ಜುಲೈ 2020 ಮಾಹೆಯ ರಸಗೊಬ್ಬರದ ಬೇಡಿಕೆಯನ್ನು ಪೂರೈಸಲಾಗಿರುತ್ತದೆ.

ಪ್ರತಿವಾರ ರಸಗೊಬ್ಬರ ತಯಾರಕ ಸಂಸ್ಥೆಗಳೊಂದಿಗೆ ರಸಗೊಬ್ಬರ ಸರಬರಾಜು ಕುರಿತು ಸಭೆ ಮತ್ತು ಪ್ರತಿದಿನ ರಸಗೊಬ್ಬರದ ರೇಕ್ ಕುರಿತು ಉಸ್ತುವಾರಿ ವಹಿಸಲಾಗಿದೆ. ಸರ್ಕಾರದಿಂದ ಪ್ರತಿಹಂಗಾಮಿನ ಪೂರ್ವದಲ್ಲಿಯೇ ರಸಗೊಬ್ಬರಗಳನ್ನು ಜಿಲ್ಲೆಗಳಿಂದ ನೀಡುವ ಬೇಡಿಕೆಯಂತೆ ಕೇಂದ್ರಕ್ಕೆ ಮನವಿ ಸಲ್ಲಿಸಲಾಗುತ್ತದೆ ಎಂದು ಹೇಳಿದರು.

## ಸಂತಾಪ

**ಬೆಂಗಳೂರು, ಆಗಸ್ಟ್ 20 (ಕರ್ನಾಟಕ ವಾರ್ತೆ):**

ಮಾಜಿ ಶಾಸಕರಾದ ಸಿ. ಗುರುಸ್ವಾಮಿ ಅವರ ನಿಧನಕ್ಕೆ ಕರ್ನಾಟಕ ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ದಿವಂಗತರು ವೃತ್ತಿಯಲ್ಲಿ ವಕೀಲರಾಗಿ ಸಮಾಜ ಸೇವೆಯಲ್ಲಿ ಆಸಕ್ತಿ ಹೊಂದಿದ್ದರು. 1999 ರಲ್ಲಿ ಹನ್ನೊಂದನೆ ವಿಧಾನಸಭೆಗೆ ಚಾಮರಾಜನಗರ ವಿಧಾನ ಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಉತ್ತಮವಾಗಿ ಕಾರ್ಯನಿರ್ವಹಿಸಿ ತಮ್ಮದೆ ಆದ ಕೊಡುಗೆಯನ್ನು ಕ್ಷೇತ್ರಕ್ಕೆ ನೀಡಿದ್ದರು.

ಇವರ ಅಗಲಿಕೆಯ ದು:ಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬವರ್ಗದವರಿಗೆ ಭಗವಂತನು ನೀಡಲೆಂದು ಹಾಗೂ ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇನೆ ಎಂದು ಸಂತಾಪ ವ್ಯಕ್ತಪಡಿಸಿದ್ದಾರೆ.

## ಗೌರಿಗಣೇಶ ಹಬ್ಬಕ್ಕೆ ಶುಭ್ಹಾಷಯಗಳು

**ಬೆಂಗಳೂರು, ಆಗಸ್ಟ್ 20 (ಕರ್ನಾಟಕ ವಾರ್ತೆ):**

ಪ್ರಪಂಚದಾದ್ಯಂತ ಕೊರೋನಾ ಮಹಾಮಾರಿಯು ಎಲ್ಲರನ್ನು ಸಾವು ನೋವಿನ ಸಂಕಷ್ಟಕ್ಕೆ ಸಿಲುಕಿಸಿ ಸಾಮಾಜಿಕ ಜೀವನ ಮತ್ತು ಜಗತ್ತಿನ ಆರ್ಥಿಕತೆಯನ್ನು ಅಸ್ತವ್ಯಸ್ತಗೊಳಿದ್ದು ಸರ್ವಮಂಗಳೆಯಾಗಿರುವ ಶ್ರೀಗೌರಿ ಹಾಗೂ ವಿಘ್ನ ನಿವಾರಕನಾದ ಶ್ರೀ ವಿನಾಯಕನು ಜಗತ್ತನ್ನು ಈ ಸಂಕಷ್ಟದಿಂದ ಕಾಪಾಡಿ ಹರಸಲೆಂದು ಪ್ರಾರ್ಥಿಸುತ್ತಾ ನಾಡಿನ ಸಮಸ್ತ ಜನತೆಗೆ ಗೌರಿ ಗಣೇಶ ಹಬ್ಬದ ಹಾರ್ದಿಕ ಶುಭಾಷಯಗಳು ಎಂದು ಕರ್ನಾಟಕ ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ತಿಳಿಸಿದ್ದಾರೆ.

# ಸಚಿವ ಸಂಪುಟ ಸಭೆಯ ತೀರ್ಮಾನಗಳು

**ಬೆಂಗಳೂರು, ಆಗಸ್ಟ್ 20 (ಕರ್ನಾಟಕ ವಾರ್ತೆ):**

*ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿ ನಡೆಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ, ಎಸ್‌ಡಿಪಿ ಸಂಘಟನೆಯನ್ನು ನಿಷೇಧ ಮಾಡುವ ಬಗ್ಗೆ ಇಂದಿನ ಸಚಿವ ಸಂಪುಟ ಸಭೆಯಲ್ಲಿ ಗಂಭೀರ ಚರ್ಚೆ ಮಾಡಲಾಗಿದೆ.*

ಹಾಲಿ ಇರುವ ಕಾನೂನಿನಡಿ ಸಂಘಟನೆಯನ್ನು ನಿಷೇಸಬೇಕೋ ಅಥವಾ 1981ರ ಕಾಯ್ದೆಗೆ ತಿದ್ದುಪಡಿ ಮಾಡಬೇಕೇ ಎಂಬುದರ ಬಗ್ಗೆ ಚರ್ಚೆ ನಡೆಸಲಾಗಿದೆ. ಈ ಸಂಘಟನೆಯು ಯಾವ ಯಾವ ಪ್ರಕರಣಗಳಲ್ಲಿ ಭಾಗಿಯಾಗಿದೆ ಎಂಬ ಬಗ್ಗೆ ಗೃಹ ಇಲಾಖೆ ಸೇರಿದಂತೆ ಮತ್ತಿತರ ಇಲಾಖೆಗಳಿಂದ ವರದಿ ನೀಡಲು ಸೂಚಿಸಲಾಗಿದೆ.

ಉತ್ತರಪ್ರದೇಶದಲ್ಲಿ ಅಲ್ಲಿನ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬುದನ್ನು ಅಧ್ಯಯನ ನಡೆಸಲಿದ್ದೇವೆ. ವರದಿ ಬಂದ ತಕ್ಷಣವೇ ಎಷ್ಟು ಸಾಧ್ಯವೋ ಅಷ್ಟು ಸಂಘಟನೆಯನ್ನು ನಿಷೇಧ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವುದಾಗಿ ಹೇಳಿದರು.

ದೇಶದಲ್ಲಿ ಇದೇ ಮೊದಲ ಬಾರಿಗೆ ರಾಜ್ಯ ಸರ್ಕಾರ ಕೃಷಿ ಬೆಳೆ ಸಮೀಕ್ಷೆ ನಡೆಸಲು ಮುಂದಾಗಿದೆ. ಈಗಾಗಲೇ ನಿಗದಿಯಾಗಿರುವಂತೆ ಇದೇ 24ರಂದು ಬೆಳೆ ಸಮೀಕ್ಷೆ ನಡೆಯಬೇಕಿತ್ತು. ಬೇರೆ ಬೇರೆ ಕಾರಣಗಳಿಂದಾಗಿ ಒಂದು ಕೇಳಿ ಮುಂದೂಡಲಾಗಿದೆ ಎಂದು ತಿಳಿಸಿದರು.

ಬೆಳೆ ಸಮೀಕ್ಷೆಯಿಂದ ರೈತರಿಗೆ ಬೆಳೆ ಪರಿಹಾರ ಕೊಡುವ ಸದುದ್ದೇಶದಿಂದ ದೇಶದಲ್ಲೇ ಮೊದಲ ಬಾರಿಗೆ ರೈತರು ತಾವು ಬೆಳೆದ ಬೆಳೆಯ ಮುಂದೆ ನಿಂತು ಫೋಟೊ ಕಳಿಸುವ ಕಾರ್ಯಕ್ರಮ ಇದಾಗಿದೆ.

ರೈತರು ಈ ಹಿಂದೆ ಒಂದೇ ಬೆಳೆಗಳನ್ನು ಮೊಬೈಲ್‌ಗೆ ಅಪ್‌ಲೋಡ್ ಮಾಡುತ್ತಿದ್ದರು. ಇವರಿಂದ ಸಾಕಷ್ಟು ಗೊಂದಲ ಉಂಟಾಗಿತ್ತು. ಇದನ್ನು ತಪ್ಪಿಸುವ ಸಲುವಾಗಿಯೇ ಸೆ.24ರವರೆಗೆ ಬೆಳೆ ಸಮೀಕ್ಷೆ ಅವಯನ್ನು ವಿಸ್ತರಣೆ ಮಾಡಿದ್ದೇವೆ. ರೈತರು ಸದುಪಯೋಗ ಪಡಿಸಿಕೊಳ್ಳಬೇಕೆಂದು ಮನವಿ ಮಾಡಿದರು.

ಪ್ರತಿ ಬೆಳೆ ಸಮೀಕ್ಷೆಯನ್ನು ರೈತರೇ ನಡೆಸಬೇಕು. ಬೆಳೆಗಳ ಫೋಟೊ ತೆಗೆಸಿ ಸರ್ಕಾರಕ್ಕೆ ಮೊಬೈಲ್ ಆಪ್ ಮೂಲಕ ವರದಿ ನೀಡಬೇಕು. ಬೆಳೆ ಹಾನಿಯಾದರೆ ಸರ್ಕಾರದಿಂದ ಪರಿಹಾರ ಪಡೆಯಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಪರಿಶಿಷ್ಟ ಜಾತಿಯ ವಿದ್ಯಾರ್ಥಿ ನಿಲಯಗಳು ಹಾಗೂ ಆಶ್ರಯ ಶಾಲೆ ವಿದ್ಯಾರ್ಥಿಗಳಿಗೆ ಊಟೋಪಚಾರ, ಸೌಲಭ್ಯ, ಕಿಟ್, ಶೂ ಸೇರಿದಂತೆ ಮತ್ತಿತರ ಸೌಲಭ್ಯಗಳನ್ನು ಒದಗಿಸಲು 65.48 ಕೋಟಿ ಅನುದಾನ ಒದಿಗಸಲು ಇಂದು ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಸಹಕಾರ ಸಂಘಗಳ ಚುನಾವಣೆಯನ್ನು ಡಿಸೆಂಬರ್ ತಿಂಗಳವರೆಗೆ ಮುಂದೂಡಲಾಗಿದ್ದು, ಇತ್ತೀಚೆಗೆ ಜಾರಿ ಮಾಡಿದ್ದ ಸುಗ್ರೀವಾಜ್ಞೆಗೆ ಸಂಪುಟ ಅನುಮೋದನೆ ಕೊಟ್ಟಿದೆ.

ಉಳಿದಂತೆ ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದ 64 ಮೊಕದ್ದಮೆಗಳನ್ನು ಸಹ ಹಿಂಪಡೆಯಲಾಗಿದೆ. ರೈತರ ಪ್ರಕರಣ, ವೈಯಕ್ತಿಕ ಪ್ರಕರಣ ಸೇರಿದಂತೆ ಒಟ್ಟು 64 ಪ್ರಕರಣಗಳನ್ನು ಹಿಂಪಡೆಯಲಾಗಿದೆ ಎಂದು ಮಾಧುಸ್ವಾಮಿ ತಿಳಿಸಿದರು.

ಕೊಳಚೆಪ್ರದೇಶಗಳ ನಿವಾಸಿಗಳಿಗೆ ಹಕ್ಕುಪತ್ರ ವಿತರಣೆ, ಚಾಮುಂಡೇಶ್ವರಿ ವಿದ್ಯುತ್ ನಿಗಮದ ಕಂಪನಿಯ ಷೇರು ಬಂಡವಾಳವನ್ನು ಒಂದು ಸಾವಿರ ಕೋಟಿಯಿಂದ 1250 ಕೋಟಿಗೆ ಹೆಚ್ಚಳ, ಅತೃವೃಷ್ಟಿಯಿಂದಾಗಿ ಹಾನಿಗೊಳಗಾದ ಕೊಡುಗಿಗೆ ಮೂಲಭೂತ ಸೌಲಭ್ಯ ಒದಗಿಸಲು 15.25 ಕೋಟಿ ಹಣ ಬಿಡುಗಡೆಗೆ ಸಂಪುಟ ಒಪ್ಪಿಗೆ ಕೊಟ್ಟಿದೆ.

ಭದ್ರಾವತಿ, ಶಿವಮೊಗ್ಗ ರೈಲ್ವೆ ನಿಲ್ದಾಣಗಳ ನಡುವೆ ಸೇತುವೆ ನಿರ್ಮಾಣ ಮಾಡಲು 13.45 ಕೋಟಿ, ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿಯಲ್ಲಿ ಮಿನಿಸೌಧ ನಿರ್ಮಾಣಕ್ಕೆ 16.5 ಕೋಟಿ ಬಿಡುಗಡೆ ಮಾಡಲಾಗಿದೆ.

ಸಾರ್ವಜನಿಕ ಬಳಕೆಯಾಗದ ಬಿ ಕರಾಬು ಜಮೀನನ್ನು 4:1 ಅನುಪಾತದಲ್ಲಿ ಗುತ್ತಿಗೆ ಪಡೆದವರಿಗೆ ಮಾರಾಟ ಮಾಡುವ ಮಹತ್ವದ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡಿದೆ.

## ಬೆಂಗಳೂರು- ನಾಡಿನ ಜನತೆಗೆ ಕನ್ನಡ ಮತ್ತು ಸಂಸ್ಕೃತಿ ಹಾಗೂ ಪ್ರವಾಸೋದ್ಯಮ ಸಚಿವ ಸಿ.ಟಿ ರವಿ ಅವರು ಗೌರಿ-ಗಣೇಶ ಹಬ್ಬಕ್ಕೆ ಶುಭಾಶಯ ಕೋರಿದ್ದಾರೆ

**ಬೆಂಗಳೂರು, ಆಗಸ್ಟ್ 20 (ಕರ್ನಾಟಕ ವಾರ್ತೆ):**

ನಾವು ಗಣೇಶ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಆಚರಿಸೋಣ. ಮಣ್ಣಿನ ಗಣಪತಿಯ ಮೂರ್ತಿಗಳನ್ನು ಪ್ರತಿಷ್ಠಾಪಿಸಿ. ಯಾವುದೇ ಕಾರಣಕ್ಕೂ ಪ್ಲಾಸ್ಟರ್ ಆಫ್ ಪ್ಯಾರಿಸ್ ನಿಂದ ತಯಾರಿಸಿದ ಗಣಪತಿ ಮೂರ್ತಿಯನ್ನು ಬಳಸ ಬೇಡಿ. ಪರಿಸರಕ್ಕೆ ಹಾನಿಯಾಗುವಂತಹ ಕೆಲಸ ಮಾಡಬೇಡಿ ಎಂದು ಸಂದೇಶ ನೀಡಿದ್ದಾರೆ.

ಇದರ ಜೊತೆಗೆ ನಾವೆಲ್ಲರೂ ಸಾಮಾಜಿಕ ಕಳಕಳಿ ಹಾಗೂ ಬದ್ಧತೆಯನ್ನು ಪ್ರದರ್ಶಿಸಬೇಕು ಎಂದೂ ಸಾರ್ವಜನಿಕರಲ್ಲಿ ಕೋರಿಕೊಂಡಿದ್ದಾರೆ.

ಗಣೇಶೋತ್ಸವ ಎಂದರೇ ಸಾಮೂಹಿಕ ; ಹಬ್ಬ. ಇದು ಸರ್ವ ಜನಾಂಗವನ್ನೂ ಬೆಸೆಯುವ, ಒಗ್ಗಟ್ಟಾಗಿ ಆಚರಿಸುವ, ಏಕತೆಯನ್ನು ಸಾರುವ ಹಬ್ಬವಾಗಿದೆ. ಈ ಉತ್ಸವವು ಪ್ರತಿ ವರ್ಷ ಪ್ರತಿ ಗಲ್ಲಿಗಳಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಡುತ್ತಾ ಬರುತ್ತಿದೆ. ಆದರೆ, ಪ್ರಸಕ್ತ ಸಾಲಿನಲ್ಲಿ ಕೋವಿಡ್-19 ಸೋಂಕು ವಿಶ್ವವನ್ನೇ ಬಾಧಿಸುತ್ತಿದೆ. ಇದು ಸಾಂಕ್ರಾಮಿಕ ಪಿಡುಗಾಗಿರುವುದರಿಂದ ಸರಳ ಆಚರಣೆಗೆ ಒತ್ತು ನೀಡಬೇಕಿದೆ.

ಸರಳ ಆಚರಣೆ ಎಂದರೆ ನಮ್ಮ ನಮ್ಮ ಮನೆ-ಮನಗಳಲ್ಲಿ ವಿಘ್ನನಿವಾರಕನಾದ ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪಿಸೋಣ. ಆ ಮೂಲಕ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳೋಣ. ಇನ್ನು ಸಾಮೂಹಿಕವಾಗಿ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡುವುದಿದ್ದರೆ ರಾಜ್ಯ ಸರ್ಕಾರ ಅದಕ್ಕಾಗಿ ಕೆಲವು ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಯಾವುದೇ ಕಾರಣಕ್ಕೂ ನೀತಿ-ನಿಯಮಗಳನ್ನು ಮೀರಿ ಯಾರೂ ಸಹ ಆಚರಣೆ ಮಾಡಬಾರದು. ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದರ ಜೊತೆಗೆ ಮಾರ್ಗಸೂಚಿಯನ್ವಯ 20 ಜನಕ್ಕಿಂತ ಹೆಚ್ಚಿನ ಮಂದಿ ಸೇರಕೂಡದು. ಜೊತೆಗೆ ಸಂಬಂಧಪಟ್ಟವರಿಂದ ಅನುಮತಿಯನ್ನು ಪಡೆದುಕೊಂಡು ಆಚರಣೆ ಮಾಡಬೇಕು.
ಭಗವಂತನ ದಯೆಯಿಂದ ಕೊರೋನಾ ಮಹಾಮಾರಿ ಕಡಿಮೆಯಾದರೆ, ಮುಂದಿನ ಬಾರಿ ಅದ್ದೂರಿಯಾಗಿಯೇ ಆಚರಿಸಿಕೊಳ್ಳಬಹುದು. ಈಗ ನಾವೆಲ್ಲರೂ ನಮ್ಮ ಹಾಗೂ ನಮ್ಮವರ ಆರೋಗ್ಯವನ್ನು ಕಾಪಾಡಿಕೊಳ್ಳುವತ್ತ ಗಮನಕೊಡಬೇಕು. ಈ ನಿಟ್ಟಿನಲ್ಲಿ ನಿಮ್ಮೆಲ್ಲರ ಸಹಕಾರದ ಅಗತ್ಯವಿದೆ.

ಬನ್ನಿ ಪರಿಸರ ಸ್ನೇಹಿಯಾಗೋಣ ಯಾವು ಹಬ್ಬ-ಹರಿದಿನಗಳಿರಲಿ ನಾವು ಸಾಧ್ಯವಾದಷ್ಟು ಪರಿಸರ ಸ್ನೇಹಿ ಆಚರಣೆಗೆ ಒತ್ತು ಕೊಡಬೇಕು. ಪರಿಸರ ನಮಗೆಲ್ಲವನ್ನೂ ಕೊಟ್ಟಿದೆ. ಹಾಗಾಗಿ ನಾವೂ ಪರಿಸರಕ್ಕೆ ನಮ್ಮ ಕೊಡುಗೆ ನೀಡಬೇಕಲ್ಲವೇ..? ಪರಿಸರಕ್ಕೆ ಮಾರಕವಾಗಿರುವ ಪ್ಲಾಸ್ಟರ್ ಆಫ್ ಪ್ಯಾರಿಸ್ ಬಣ್ಣ ಲೇಪಿತ ಗಣೇಶ ಮೂರ್ತಿಗಳ ತಯಾರಿಕೆ ಹಾಗೂ ಮಾರಾಟ ಎರಡಕ್ಕೂ ಕಡಿವಾಣ ಹಾಕಬೇಕಿದೆ.

ಹೀಗಾಗಿ ಪ್ರಸಕ್ತ ಬಾರಿಯ ಗಣೇಶಹಬ್ಬವನ್ನು ಪಟಾಕಿರಹಿತವಾಗಿ ಆಚರಣೆ ಮಾಡಿ. ಪಟಾಕಿಯ ಬದಲು ದೀಪಗಳನ್ನು ಬೆಳಗಿ ಮನೆಯೊಳಗೆ ಹಾಗೂ ಮನೆ ಹೊರಗಿನ ಆವರಣದಲ್ಲಿ ದೀಪಗಳನ್ನು ಹಚ್ಚಿ ಆ ಮೂಲಕ ನಮ್ಮ ಸಂಭ್ರಮವನ್ನು ವ್ಯಕ್ತಪಡಿಸೋಣ.

ನಿರ್ವಿಘ್ನಕಾರಕ ವಿಘ್ನೇಶ್ವರನ ಕೃಪಾಕಟಾಕ್ಷ ಎಲ್ಲರಿಗು ಲಭಿಸಲಿ.

ಗೌರಿ - ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು